**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 :** **ದಿನಾಂಕ : 30–12–2019**

# ಪತ್ರಿಕಾ ಆಮಂತ್ರಣ

**1.** 28ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್, ಬೃಹತ್ ಮಕ್ಕಳ ಸಮಾವೇಶ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಉಡುಗೆ ಪ್ರದರ್ಶನ (ಎತ್ನಿಕ್ ಶೋ)

**<u>ಉದ್ಘಾಟನೆ:</u>**

ಶ್ರೀಮತಿ ಶಶಿಕಲಾ ಜೊಲ್ಲೆ ಅಣ್ಣಸಾಹೇಬ್
ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೇ ಸಚಿವರು.

**<u>ಅಧ್ಯಕತೆ:</u>**

ಶ್ರೀ ಕೆ.ಜೆ.ಜಾರ್ಜ್
ಮಾಜಿ ಸಚಿವರು

**ದಿನಾಂಕ:** 31–12–2019 ಮಂಗಳವಾರ, ಸಮಯ: ರಾತ್ರಿ 8.00 ಗಂಟೆಗೆ.
**ಸ್ಥಳ:** ಡಾ. ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

## ಪತ್ರಿಕಾ ಪ್ರಕಟಣೆ

# ಕೃಷಿ ವಿಶ್ವವಿದ್ಯಾನಿಲಯದ ಜಿ.ಕೆ.ವಿ.ಕೆ. ಆವರಣದಲ್ಲಿ ಜನವರಿ 3–7ರವರೆಗೆ 107ನೇ ಭಾರತೀಯ ವಿಜ್ಞಾನ ಸಮ್ಮೇಳನ ಪ್ರಧಾನ ಮಂತ್ರಿಗಳಿಂದ ಉದ್ಘಾಟನೆ

**ಬೆಂಗಳೂರು, ಡಿಸೆಂಬರ್ 30 (ಕರ್ನಾಟಕ ವಾರ್ತೆ)**

ಜನವರಿ 3–7ರವರೆಗೆ 107ನೇ ಭಾರತೀಯ ವಿಜ್ಞಾನ ಸಮ್ಮೇಳನ (ISC–2020)ವನ್ನು "**ವಿಜ್ಞಾನ ಮತ್ತು ತಂತ್ರಜ್ಞಾನ: ಗ್ರಾಮೀಣಾಭಿವೃದ್ಧಿ**" ವಿಷಯದ ಮೇಲೆ ನಗರದ ಕೃಷಿ ವಿಶ್ವವಿದ್ಯಾನಿಲಯದ ಜಿ.ಕೆ.ವಿ.ಕೆ. ಆವರಣದಲ್ಲಿ ಆಯೋಜಿಸಲಾಗುತ್ತಿದ್ದು, ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಉದ್ಘಾಟಿಸಲಿದ್ದಾರೆ ಎಂದು ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ಅವರು ತಿಳಿಸಿದರು.

ಸಮ್ಮೇಳನ ಕುರಿತು ಇಂದು ವಿವಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿ ಕುರಿತು ಮಾತನಾಡಿದ ಅವರು ಈ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮದಲ್ಲಿ ನೋಬೆಲ್ ಪ್ರಶಸ್ತಿ ಪುರಸ್ಕೃತರು, ವಿಜ್ಞಾನಿಗಳು, ವಿದ್ವಾಂಸರು ಮತ್ತು ಪ್ರಧಾನ ಉಪನ್ಯಾಸಕರು, ಕಾರ್ಯನೀತಿ ರಚಿಸುವವರು, ವಿದ್ಯಾರ್ಥಿಗಳು ಮತ್ತು ವಿವಿಧ ಸಂಘ ಸಂಸ್ಥೆಗಳ ಆಹ್ವಾನಿತರು ಸೇರಿ ಸುಮಾರು 15,000ಕ್ಕೂ ಹೆಚ್ಚು ಪ್ರತಿನಿಧಿಗಳು ಈ ಭಾಗವಹಿಸುವರೆಂದು ನಿರೀಕ್ಷಿಸಲಾಗಿದೆ ಎಂದು ಹೇಳಿದರು.

ಈ ಸಮ್ಮೇಳನದಲ್ಲಿ ವಿಜ್ಞಾನದ ಸುಮಾರು 14 ವಿವಿಧ ವಿಭಾಗಗಳ ಪ್ರಸ್ತುತ ಸಂಶೋಧನೆ ಮತ್ತು ಆವಿಷ್ಕಾರಗಳ ಬಗ್ಗೆ ಸವಿಸ್ತಾರವಾದ ಉಪನ್ಯಾಸ, ಚರ್ಚಾಗೋಷ್ಠಿ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರಮುಖವಾಗಿ ಈ ಸಮ್ಮೇಳನದಲ್ಲಿ “ಮಹಿಳಾ ವಿಜ್ಞಾನ ಸಮ್ಮೇಳನ”, “ಮಕ್ಕಳ ವಿಜ್ಞಾನ ಸಮ್ಮೇಳನ” ಮತ್ತು “ವಿಜ್ಞಾನ ಸಂವಾಹಕರ ಸಮ್ಮೇಳನ”ಗಳನ್ನು ಆಯೋಜಿಸಲಾಗಿದೆ. ಈ ಬಾರಿ ವಿಶೇಷವಾಗಿ “ರೈತರ ವಿಜ್ಞಾನ ಸಮ್ಮೇಳನ”ವನ್ನು ಸಹ ಹಮ್ಮಿಕೊಳ್ಳಲಾಗಿದೆ. ಆಯಾ ವಿಷಯಗಳಲ್ಲಿ ನೈಪುಣ್ಯತೆ ಹೊಂದಿ ಪ್ರಖ್ಯಾತರಾಗಿರುವವರನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ವಿಜ್ಞಾನ ವಸ್ತುಪ್ರದರ್ಶನವನ್ನು ಸಹ ಏರ್ಪಡಿಸಲಾಗಿದೆ.

ವಿಜ್ಞಾನ ವಸ್ತುಪ್ರದರ್ಶನವು "Pride of India" ಎಂಬ ಶೀರ್ಷಿಕೆಯಡಿಯಲ್ಲಿ ವಿವಿಧ ತಂತ್ರಜ್ಞಾನಗಳು, ಯಂತ್ರೋಪಕರಣಗಳು ಹಾಗೂ ಮಾದರಿಗಳನ್ನು ಪ್ರದರ್ಶಿಸಲಾಗುತ್ತದೆ. ವಿಜ್ಞಾನ ವಸ್ತುಪ್ರದರ್ಶನದ ಪ್ರವೇಶ ಉಚಿತವಾಗಿದ್ದು, 4 ರಿಂದ 7ನೇ ಜನವರಿ, 2020ರವರೆಗೆ ಸಾರ್ವಜನಿಕರು ಭೇಟಿನೀಡಬಹುದು ಎಂದರು.

ರಾಷ್ಟ್ರೀಯ ವಿಜ್ಞಾನ ಪರಿಷತ್ ಅಧ್ಯಕ್ಷರಾದ ಡಾ.ಕೆ.ಎಸ್.ರಂಗಪ್ಪ ಅವರು ಮಾತನಾಡಿ ಪ್ರಸ್ತುತ 107ನೇ ಭಾರತೀಯ ವಿಜ್ಞಾನ ಸಮ್ಮೇಳನ (ISC–2020)ದ ಹಲವಾರು ಮಾಹಿತಿಗಳನ್ನು ನಿಖರವಾಗಿ ಒದಗಿಸಲು "ISC 2020 UASB" ಎಂಬ ಮೊಬೈಲ್ ಆ್ಯಪ್‌ನ್ನು ಅಭಿವೃದ್ಧಿಪಡಿಸಿದ್ದು ಈ ಆ್ಯಪ್‌ನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹಲವಾರು ಪ್ರಯೋಜನಗಳನ್ನು ಹೊಂದಿರುವ ಈ ಆ್ಯಪ್‌ನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ವಿವರಗಳಿಗಾಗಿ ಶುಲ್ಕರಹಿತ ಕರೆ ಸಂಖ್ಯೆ 18005722020ನ್ನು ಸಂಪರ್ಕಿಸಬಹುದು ಅಥವಾ www.isc2020uasb.com ವೆಬ್ ಸೈಟ್‌ಗೆ ಭೇಟಿ ನೀಡಬಹುದು.

107ನೇ ಕಾಂಗ್ರೆಸ್ ಅನ್ನು "ವಿಜ್ಞಾನ ಮತ್ತು ತಂತ್ರಜ್ಞಾನ:ಗ್ರಾಮೀಣಾಭಿವೃದ್ಧಿ" ಎಂಬ ವಿಷಯದೊಂದಿಗೆ ನಡೆಸಲಾಗುತ್ತಿದೆ. ಕೃಷಿ ಗ್ರಾಮೀಣಾಭಿವೃದ್ಧಿಯ ಅವಿಭಾಜ್ಯ ಅಂಗವಾಗಿರುವುದರಿಂದ, ರೈತ ಕೇಂದ್ರಿತ ವಿಜ್ಞಾನ ಸಮಾವೇಶವನ್ನು ಆಯೋಜಿಸಲಾಗಿದೆ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಕೃಷಿ ಅನುಸಂದಾನ ಪರಿಷತ್ತು (ಐ.ಸಿ.ಎ.ಆರ್.), ನವದೆಹಲಿಯ ಸಹಯೋಗದೊಂದಿಗೆ ರೈತರನ್ನು ಆಯ್ಕೆ ಮಾಡಲಾಗಿದೆ. ಆಡಳಿತಾತ್ಮಕ ಉದ್ದೇಶಕ್ಕಾಗಿ ಐ.ಸಿ.ಎ.ಆರ್. ದೇಶವನ್ನು 11 ವಲಯಗಳಾಗಿ ವಿಂಗಡಿಸಿದೆ. 10 ವಲಯಗಳಿಂದ, ಪ್ರತಿ 10 ವಲಯದಿಂದ 10 ನವೀನ ರೈತರನ್ನು ಆಯ್ಕೆ ಮಾಡಲಾಗಿದ್ದು, ವಲಯ–8 (ದಕ್ಷಿಣ ವಲಯ) ದಿಂದ ಇಪ್ಪತ್ತು ರೈತರನ್ನು ಕಾಂಗ್ರೆಸ್‌ಗೆ ಆಯ್ಕೆ ಮಾಡಲಾಗಿರುತ್ತದೆ. ಒಟ್ಟು 120 ನವೀನ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಪ್ರತಿ ವಲಯದಿಂದ ರೈತರೊಂದಿಗೆ ಕೃಷಿ ವಿಜ್ಞಾನ ಕೇಂದ್ರದ ಪ್ರತಿನಿಧಿಯೂ ಸಹ ಇರುತ್ತಾರೆ. ರೈತರ ಪ್ರವಾಸ ಭತ್ಯೆ ಮತ್ತು ನೋಂದಣಿ ವೆಚ್ಚವನ್ನು ಆಯಾ ಕೃಷಿ ವಿಜ್ಞಾನ ಕೇಂದ್ರ / ವಲಯ ಕಛೇರಿಗಳ ಮೂಲಕ ಐ.ಸಿ.ಎ.ಆರ್. ನೀಡಲಿದೆ. ಕೃ.ವಿ.ವಿ. ಬೆಂಗಳೂರು ಊಟ, ವಸತಿ ಮತ್ತು ಸ್ಥಳೀಯಾ ಸಾರಿಗೆ

ಸೌಕರ್ಯವನ್ನು ಒದಗಿಸಲಿದೆ. ಆಸಕ್ತ ಪ್ರಗತಿಪರ ರೈತರು, ವಿಸ್ತರಣಾ ಕಾರ್ಯಕರ್ತರು ಮತ್ತು ಸಾರ್ವಜನಿಕರು ಭಾಗವಹಿಸಬಹುದು.

ಭಾರತೀಯ ವಿಜ್ಞಾನದ ಸಮ್ಮೇಳನದ ಪ್ರತಿಷ್ಠಿತ ವಸ್ತು ಪ್ರದರ್ಶನ (ಭಾರತದ ಹೆಮ್ಮೆ)ವು ಅತಿದೊಡ್ಡ ವೈಜ್ಞಾನಿಕ ಪ್ರದರ್ಶನವಾಗಿದ್ದು, ಇದರಲ್ಲಿ ಆತ್ಯಾಧುನಿಕ ತಂತ್ರಜ್ಞಾನಗಳು, ಪ್ರಮುಖ ವೈಜ್ಞಾನಿಕ ಉತ್ಪನ್ನಗಳು ಮತ್ತು ಸೇವೆಗಳು, ಸಂಶೋಧನೆ ಮತ್ತು ಅಭಿವೃದ್ಧಿಗಳ ಉಪಕ್ರಮಗಳು, ಯೋಜನೆಗಳು, ಭಾರತದ ಅತ್ಯುತ್ತಮ ಸಾಧನೆಗಳು, ಪ್ರಮುಖ ಸಾರ್ವಜನಿಕ ಮತ್ತು ಖಾಸಗಿ ವಲಯಗಳು, ಸರ್ಕಾರಿ ಇಲಾಖೆಗಳು, ಸಂಶೋಧನಾ ಪ್ರಯೋಗಾಲಯಗಳು, ಶಿಕ್ಷಣ, ಕಾರ್ಪೋರೇಟ್ ಮತ್ತು ರಕ್ಷಣಾ ಸಂಸ್ಥೆಗಳು ಭಾಗವಹಿಸಲಿವೆ ಎಂದು ಹೇಳಿದರು.

ಜನವರಿ 7ರಂದು ನಡೆಯುವ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಉಪ ರಾಷ್ಟ್ರಪತಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.